# ಸಾಧನೆ ಮತ್ತು ಶ್ರಮ



❁ ಒಂದು ಸ್ವಲ್ಪ ಸಾಧನೆ ಮಾಡಲೇಬೇಕು. ಸಾಧನೆ ಮಾಡುತ್ತ ಮಾಡುತ್ತ ಮುಂದುವರಿದರೆ, ಕ್ರಮೇಣ ಆನಂದ ದೊರೆಯುತ್ತದೆ. ನೆಲದಲ್ಲಿ ಬಹಳ ಆಳದಲ್ಲಿ ಒಂದು ಗಡಿಗೆ ಹಣವನ್ನು ಹೂತಿಟ್ಟಿರುವುದಾದರೆ, ಅದು ಯಾರಿಗಾದರೂ ಬೇಕಾದರೆ, ಶ್ರಮವಹಿಸಿ ಅದನ್ನು ತೆಗೆಯ ಬೇಕು. ಅಗೆಯುವಾಗ ಬೆವರು ಸುರಿಯುತ್ತದೆ. ಬಹಳವಾಗಿ ಅಗೆದ ನಂತರ, ಯಾವಾಗ ಗುದ್ದಲಿಯ ಮೊನೆ ಆ ಗಡಿಗೆಗೆ ತಗುಲಿ ಹಣ 'ಧಣ ಧಣ' ಎಂದು ಶಬ್ದ ಮಾಡುವುದೊ ಆಗ ಒಡನೆಯೇ ಆನಂದ ಉಂಟಾಗುತ್ತದೆ. ಅದು ಎಷ್ಟೊಂದು ಹೆಚ್ಚಾಗಿ 'ಧಣ ಧಣ' ಎಂದು ಶಬ್ದ ಮಾಡುತ್ತದೆಯೊ ಅಷ್ಟೊಂದು ಹೆಚ್ಚಾಗಿ ಆನಂದ ಉಂಟಾಗುತ್ತದೆ.

❁ ಈ ಸಂಸಾರ ಒಂದು ಮುಳ್ಳುಗಿಡ. ಕೈ ಹಾಕಿತು ಅಂದರೆ ತರಚಿ ರಕ್ತ ಸುರಿಯಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದು ಕೊಂಡು ಬಂದು ಅದರ ಹತ್ತಿರ ಕುಳಿತುಕೊಂಡು ಜಪಿಸು: 'ಈ ಗಿಡ ಸುಟ್ಟುಹೋಯಿತು' ಎಂದು. ಅದಷ್ಟಕ್ಕೆ ಅದು ಸುಟ್ಟು ಹೋಗುತ್ತದೆಯೆ? ಜ್ಞಾನಾಗ್ನಿಯನ್ನು ಹೊತ್ತಿಸಿಕೊ. ಆ ಅಗ್ನಿ ಯಿಂದ ಅದನ್ನು ಸುಡು. ಆಗ ಮಾತ್ರವೇ ಅದು ಸುಟ್ಟು ಬೂದಿ ಯಾಗುತ್ತದೆ.

❁ ಸಾಧನೆಯ ಸಮಯದಲ್ಲಿ ಸ್ವಲ್ಪ ಹೆಚ್ಚು ಶ್ರಮ ತೆಗೆದು ಕೊಳ್ಳಬೇಕು. ಆ ಬಳಿಕ ರಾಜರಸ್ತೆ. ನದಿ ಡೊಂಕಾಗಿ ಹರಿಯುವ ಜಾಗದಲ್ಲಿ ಸ್ವಲ್ಪ ಶ್ರಮ ತೆಗೆದುಕೊಂಡು ಮುಂದುವರಿದು, ಬಳಿಕ ಅನುಕೂಲವಾದ ಗಾಳಿ ದೊರೆತಾಗ ದೋಣಿಯನ್ನು ಸುಮ್ಮನೆ ತೇಲಿಬಿಡು.

❁ ಭಕ್ತ: ''ಮನೆಯ ಯಜಮಾನನೊಡನೆ ಪರಿಚಯ ಮಾಡಿಕೊಳ್ಳುವುದು ಹೇಗೆ ಎಂಬುದೇ ಪ್ರಶ್ನೆ.''

ಶ್ರೀರಾಮಕೃಷ್ಣರು: ''ಅದಕ್ಕಾಗೇ ಶ್ರಮಿಸಬೇಕು. ಭಗವಂತ ನಿದ್ದಾನೆ ಎಂದು ಸುಮ್ಮನೆ ಕೈಕಟ್ಟಿ ಕುಳಿತಿದ್ದರೆ ಆಗದು. ಹೇಗೋ ಆತನ ಹತ್ತಿರ ಹೋಗಬೇಕು. ಏಕಾಂತ ಸ್ಥಳದಲ್ಲಿ ಆತನನ್ನು ಕರೆ, ಆತನಿಗೆ ಪ್ರಾರ್ಥನೆಮಾಡು, 'ನನಗೆ ನಿನ್ನ ದರ್ಶನ ಕೊಡು' ಅಂತ ವ್ಯಾಕುಲನಾಗಿ ಅಳು. ಕಾಮ-ಕಾಂಚನಕ್ಕಾಗಿ ಹುಚ್ಚನ ಹಾಗೆ ಅಲೆಯಲು ಸಿದ್ಧನಾಗಿದ್ದೀಯೆ! ಈಗ ಭಗವಂತನಿಗಾಗಿ ಸ್ವಲ್ಪ ಹುಚ್ಚನಾಗು. ಜನ ಹೇಳಿಕೊಳ್ಳಲಿ, ಭಗವಂತನಿಗಾಗಿ ಆತ ಹುಚ್ಚ ನಾಗಿಬಿಟ್ಟ ಅಂತ. ಒಂದೆರಡು ದಿನಗಳ ಮಟ್ಟಿಗಾದರೂ ಎಲ್ಲ ವನ್ನೂ ತ್ಯಜಿಸಿ ಆತನನ್ನು ಏಕಾಂತದಲ್ಲಿ ಕರೆ.

❁ 'ಭಗವಂತನಿದ್ದಾನೆ' ಎಂದು ಕೇವಲ ಬಾಯಲ್ಲಿ ಹೇಳುತ್ತ ಕೈಕಟ್ಟಿ ಸುಮ್ಮನೆ ಕುಳಿತಿದ್ದರೆ ಏನಾಗುತ್ತದೆ? ಹಾಲದಾರಪುಕುರದಲ್ಲಿ ದೊಡ್ಡ ದೊಡ್ಡ ಮೀನುಗಳೇನೋ ಇವೆ. ಆದರೆ ಆ ಪುಷ್ಕರಣಿಯ ದಡದಲ್ಲಿ ಸುಮ್ಮನೆ ಕೈಕಟ್ಟಿ ಕುಳಿತಿದ್ದರೆ ಮೀನು ದೊರೆಯುವುದೆ? ಎರೆ ಯನ್ನು ತಯಾರುಮಾಡಿ ಅದನ್ನು ನೀರಿನಲ್ಲಿ ಬಿಸಾಡು. ಬಳಿಕ ಮೀನು ಆಳದ ನೀರಿನಲ್ಲಿ ಮೇಲಕ್ಕೆ ಬರುತ್ತದೆ, ನೀರು ಅಲುಗಲು ಆರಂ ಭಿಸುತ್ತದೆ. ಆಗ ನಿನಗೆ ಬಹಳ ಆನಂದವಾಗು ತ್ತದೆ. ಬಹುಶಃ ಅವುಗಳಲ್ಲಿ ಒಂದು ಮೀನು ನೀರಿನ ಮೇಲಕ್ಕೆ ತಟಕ್ಕನೆ ಒಂದು ಸ್ವಲ್ಪ ಎದ್ದಾಗ ಅದರ ಆಕೃತಿ ನಿನಗೆ ಗೋಚರವಾಗ ಬಹುದು. ಆಗ ನಿನಗೆ ಆನಂದವಾಗುತ್ತದೆ.

❁ ಸಾಧನೆಮಾಡಿ ಆಧ್ಯಾತ್ಮಿಕ ಶಕ್ತಿಯನ್ನು ಸಂಪಾದಿಸಬೇಕು. ಹಾಗೆ ಮಾಡದೆ ಇದ್ದರೆ ಪ್ರಚಾರಕಾರ್ಯ ಸಾಧ್ಯವಿಲ್ಲ. 'ತನಗೇ ಮಲಗಲು ಸ್ಥಳವಿಲ್ಲ. ಶಂಕರನನ್ನು ಬೇರೆ ಕರೆಯುತ್ತಿದ್ದಾನೆ!' ಮಲಗಲು ತನಗೇ ಸ್ಥಳವಿಲ್ಲ. ಆದರೂ, 'ಓ! ಶಂಕರಾ ಬಾ; ನನ್ನೊಡನೆ ಮಲಗಿಕೋ' ಅಂತ ಕರೆಯೋದು ಬೇರೆ!

❁ ಮನಸ್ಸನ್ನೆಲ್ಲ ಏಕೀಕರಿಸಿ ಆತನ ಕಡೆಗೆ ತಿರುಗಿಸದಿದ್ದರೆ ಆತನ ದರ್ಶನ ಪಡೆಯಲಾಗುವುದೆ? ಭಾಗವತದಲ್ಲಿ ಶುಕ ದೇವನ ಸಂಬಂಧವಾಗಿ ಹೇಳಿದೆ – ಭರ್ಜಿ ಹಿಡಿದ ಸಿಪಾಯಿಯ ಹಾಗೆ; ದಾರಿಯಲ್ಲಿ ಹೋಗುತ್ತಿದ್ದಾನೆ, ಬೇರೆ ಯಾವ ಕಡೆಗೂ ದೃಷ್ಟಿಯಿಲ್ಲ. ಒಂದೇ ದೃಷ್ಟಿ, ಕೇವಲ ಭಗವಂತನ ಕಡೆಗೇ ದೃಷ್ಟಿ. ಯೋಗ ಎಂಬುದು ಇದೇನೇ.

❁ ಚಾತಕಪಕ್ಷಿ ಕೇವಲ ಮಳೆ ನೀರನ್ನು ಮಾತ್ರವೇ ಕುಡಿಯು ತ್ತದೆ. ಗಂಗೆ, ಯಮುನೆ, ಗೋದಾವರಿ ಮತ್ತು ಉಳಿದ ನದಿ ಗಳಲ್ಲೆಲ್ಲಾ ನೀರು ತುಂಬಿದೆ. ಸಪ್ತಸಮುದ್ರಗಳೂ ತುಂಬಿ ತುಳು ಕಾಡುತ್ತಿವೆ. ಆದರೂ ಅದು ಆ ನೀರನ್ನೆಲ್ಲ ಮುಟ್ಟದು. ಮಳೆ ಬೀಳಬೇಕು. ಅದು ಆ ನೀರನ್ನು ಕುಡಿಯಬೇಕು.

❁ ಭಗವಂತನ ಸಾಕ್ಷಾತ್ಕಾರ ದೊರೆಯಬೇಕಾದರೆ ತೀವ್ರ ವೈರಾಗ್ಯ ಅತ್ಯಂತ ಆವಶ್ಯಕ. ಯಾವುದು ಭಗವಂತನ ಸಾಕ್ಷಾ ತ್ಕಾರಕ್ಕೆ ತಡೆಯಾಗಿ ತೋರಿ ಬರುವುವೊ ಅವನ್ನೆಲ್ಲ ಒಡನೆಯೇ ತ್ಯಾಗಮಾಡಿಬಿಡಬೇಕು. ಮುಂದೆ ನೋಡೋಣ ಅಂತ ಸುಮ್ಮನೆ ಕೈಕಟ್ಟಿ ಕುಳಿತಿರಬಾರದು. ಕಾಮಕಾಂಚನವೇ ಭಗವಂತನ ಸಾಕ್ಷಾತ್ಕಾರಕ್ಕೆ ಅಡ್ಡಲಾಗಿ ಬಿದ್ದಿರುವ ತಡೆ. ಮನಸ್ಸನ್ನು ಅವುಗಳ ಕಡೆಯಿಂದ ಎಳೆದುಕೊಂಡು ಬಿಡಬೇಕು.

ಶ್ರೀರಾಮಕೃಷ್ಣ ವಚನವೇದದಿಂದ